# ಮಾದರಿ ಸೊಸೆ ಸರಸ್ವತಿ

## ಪ್ರೀತಿ ಶ್ರೀನಿವಾಸ್
### ಸ್ಟಾರ್ ಸುವರ್ಣದ 'ವರಲಕ್ಷ್ಮಿ ಸ್ಟೋರ್ಸ್'ನ ಸರಸ್ವತಿ

◆ **ನಟಿ ಆಗದಿದ್ದರೆ ಏನು ಆಗ್ತಾ ಇದ್ರೀ?**

ವೃತ್ತಿಪರವಾಗಿ ನಾನು ಮನೋಶಾಸ್ತ್ರಜ್ಞೆ. ಅದನ್ನೇ ಮುಂದುವರಿಸುತ್ತಿದ್ದೆ. ಔದ್ಯೋಗಿಕ ಮನಶಾಸ್ತ್ರದಲ್ಲಿ ಪಿಜಿ ಮಾಡಿದ್ದೇನೆ. ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಎಂಬಿಎಯನ್ನೂ ಪಡೆದಿದ್ದೇನೆ. ನಟಿಯಾಗದ ಪಕ್ಷದಲ್ಲಿ ನನ್ನ ಉದ್ಯೋಗವನ್ನೇ ಮುಂದುವರಿಸುತ್ತಿದ್ದೆ. ನನಗೂ ಶಿಕ್ಷಣ ಪೂರೈಸಿದ ನಂತರ ಕೆಲಸಕ್ಕೆ ಹೋಗುವ ಯೋಚನೆ ಇತ್ತು. ಆದರೆ ಬಣ್ಣದ ಒಲವು ಇರುವುದರಿಂದ ಈ ಕಡೆ ಹೆಜ್ಜೆಯನ್ನೂರಿದೆ. ಇಲ್ಲಿ ನಿರಂತರವಾಗಿ ಅವಕಾಶಗಳು ಸಿಗುತ್ತಿರುವುದರಿಂದ ಹಾಗೆಯೇ ಸಾಗುತ್ತಾ ಬಂದಿದ್ದೇನೆ.

◆ **ಬಣ್ಣದ ಲೋಕ ಹೇಗೆ ತೆರೆದುಕೊಂಡಿತು?**

ಬೆಂಗಳೂರಿನ ಹೃದಯಭಾಗದಲ್ಲಿರುವ ಮಹಾರಾಣಿ ಕಾಲೇಜಿನಲ್ಲಿ ಬಿ.ಎ. ಓದಿದೆ. ಕಾಲೇಜಿನ ಮಿಸ್ ಮಹಾರಾಣಿ ಪಟ್ಟ ನನ್ನ ಮುಡಿಗೇರಿತ್ತು. ಅದೇ ಸಂದರ್ಭದಲ್ಲಿ ನಟಿಸುವ ಗೀಳು ಚಿಗುರೊಡೆದಿತ್ತು. ನನ್ನ ಗೆಳತಿಯೊಬ್ಬಳು ನಟನೆ ಮಾಡುತ್ತಿದ್ದಳು ಅವಳಿಂದ ಈ ಕ್ಷೇತ್ರ ಪರಿಚಯವಾಯಿತು. ನಮ್ಮ ಪೋಷಕರು ತುಂಬ ಸಂಪ್ರದಾಯಸ್ಥರು. ಬೇಡ ಎಂದೇ ಹೇಳುತ್ತಿದ್ದರು, ಹಾಗೂ ಹೀಗೂ ಹೇಳಿ ನಟಿಸಲು ಒಪ್ಪಿಸಿದೆ. ಮದುವೆ ಆದ ಮೇಲೆ ಪೂರ್ಣಾವಧಿ ನಟಿಯಾಗಲು ಸಾಧ್ಯ ಆಯ್ತು. ಒಂದು ರೀತಿಯಲ್ಲಿ ನನ್ನ ಬದುಕಲ್ಲಿ ಉಲ್ಟಾ ಕೇಸ್, ಬಹುತೇಕರು ಮದುವೆಯಾದ ನಂತರ ಅಭಿನಯ ಬಿಡುತ್ತಾರೆ; ನಾನು ಆರಂಭಿಸಿದ್ದೇನೆ. ನನ್ನ ಪತಿ ಡಾ. ಶ್ರೀನಿವಾಸಮೂರ್ತಿ ಪ್ರೋತ್ಸಾಹವೇ ಇದಕ್ಕೆ ಕಾರಣ. ಅವರು ಹೇಳಿದ್ದೇನೆಂದರೆ ತಮಗೆ ನಟನೆ ಬರಲ್ಲ, ನಿನಗೆ ಡಾಕ್ಟರ್ ಆಗಲು ಆಗಲ್ಲ. ನಿನ್ನ ಪ್ರತಿಭೆಯನ್ನು ಬಳಲುವಂತೆ ಮಾಡಬೇಡ ಎಂದು ಹುರಿದುಂಬಿಸಿದರು. ಏಳು ವರ್ಷಗಳ ಕಾಲ ತೆಲುಗಿನಲ್ಲಿ ಮಾಡಿದ್ದೇನೆ. ಅಲ್ಲಿ ನನ್ನನ್ನು ಗುರುತಿಸಿಕೊಳ್ಳಲು ಸಾಧ್ಯವಾಯಿತು.

◆ **ನಿಮ್ಮ ಪಾತ್ರದ ಮಹತ್ವ ಏನು?**

ವೃತ್ತಿಯನ್ನು ಸುವರ್ಣದಿಂದಲೇ ಆರಂಭಿಸಿದೆ. 'ವರಲಕ್ಷ್ಮಿ ಸ್ಟೋರ್ಸ್'ಗೆ ಸ್ಟಾರ್ ಸುವರ್ಣ ತಂಡ ನನ್ನನ್ನು ಗುರುತಿಸಿ ಕರೆದಿದೆ. ಇದರಲ್ಲಿ ಸರಸ್ವತಿ ಎನ್ನುವ ಪ್ರಧಾನ ಪಾತ್ರ ಮಾಡುತ್ತಿದ್ದೇನೆ. ವರಲಕ್ಷ್ಮಿ ಸ್ಟೋರ್ಸ್ ಕುಟುಂಬದ ಹಿರಿಯ ಸೊಸೆ. ಪ್ರಜ್ಞಾವಂತೆ, ಒಂದು ಕುಟುಂಬದ ಹಿರಿಯರು ಸಾಮಾನ್ಯವಾಗಿ ಬಯಸುವ ಸೊಸೆಯಂತೆ ಈ ಪಾತ್ರ ಇದೆ. ಆದರ್ಶಗುಣದ ಹೆಣ್ಣುಮಗಳ ಪಾತ್ರ ನನ್ನ ವಯಸ್ಸಿಗಿಂತ ದೊಡ್ಡದು. ಅದರೊಳಗೆ ಪರಕಾಯ ಪ್ರವೇಶ ಮಾಡಬೇಕು. ಅದು ಸವಾಲು ಎನ್ನಿಸುತ್ತಿದೆ. ಪಾತ್ರದಲ್ಲಿ ನನ್ನ ಮೈದುನರನ್ನೇ ಮಕ್ಕಳಂತೆ ಭಾವಿಸಿ ನೋಡಬೇಕು. ಕುಟುಂಬದಲ್ಲಿ ತುಂಬ ಜವಾಬ್ದಾರಿ ಇದೆ. ಬೇರೆ ಧಾರಾವಾಹಿಗಳ ನಾಯಕಿಯರ ಪಾತ್ರದಂತೆ ಇದಿಲ್ಲ. ಇಲ್ಲಿನ ಭಾಷೆಯೂ ಕೂಡ ತುಂಬಾ ಚಾಲೆಂಜಿಂಗ್. ಮಂಡ್ಯ ಜಿಲ್ಲೆಯ ಗ್ರಾಮೀಣ ಸೊಗಡಿನ ಅಪ್ಪಟ ಹಳ್ಳಿ ಮಾತು. ಇದು ನನಗೆ ಒಂದಿಷ್ಟು ಕಷ್ಟ ಅನ್ನಿಸುತ್ತೆ.



ಹಳ್ಳಿ ಪರಿಸರದಲ್ಲೇ ಚಿತ್ರೀಕರಣ ಮಾಡಲಾಗುತ್ತಿದೆ. ಜನರ ಮನಸ್ಸಿಗೆ ಹತ್ತಿರವಾಗುವಂತಹ ಪಾತ್ರ.

◆ **ಸಮಾಜಮುಖಿಯಾಗಿ ನಿಮ್ಮ ಆಲೋಚನೆ**

ಸಾಮಾನ್ಯವಾಗಿ ಆ ರೀತಿಯ ಯೋಚನೆಗಳು ಬರ್ತಾ ಇರುತ್ತವೆ. ಮೂಲತಃ ನಾನೊಬ್ಬ ಮನೋಶಾಸ್ತ್ರಜ್ಞೆ. ಆ ರೀತಿಯ ಚಿಂತನಾ ಲಹರಿ ಓಡುತ್ತಿರುತ್ತದೆ. ಚಾರಿಟೆಬಲ್ ಟ್ರಸ್ಟ್– ಅನಾಥಾಶ್ರಮಗಳನ್ನು ನೋಡಿದಾಗಲೂ ಏನೇನೋ ಯೋಚನೆಗಳು ಬರುತ್ತವೆ. ಆದರೆ ನನಗೆ ಏನೆನಿಸುತ್ತದೆ ಅಂದರೆ, ಇಳಿವಸ್ಸಿನಲ್ಲಿ ಮಾನಸಿಕ ಸ್ಥಿತಿಯಲ್ಲಿ ಅನೇಕ ಬದಲಾವಣೆ ಆಗುತ್ತವೆ. ಆ ಸಂದರ್ಭದಲ್ಲಿ ಅವರು ಖುಷಿಯಾಗಿ ಇರುವಂತೆ ನೋಡಿಕೊಳ್ಳಬೇಕು. ನಮ್ಮ ಮನೆಗಳಲ್ಲಿಯೇ ನಾವು ಹಿರಿಯರನ್ನು ನೋಡಿದರೆ ಅರ್ಥವಾಗುತ್ತದೆ. ವಯಸ್ಸಾಗುತ್ತಾ ಹಿರಿಯರನ್ನು ನಾವು ತಿರಸ್ಕಾರ ಮನೋಭಾವದಿಂದ ಕಾಣುತ್ತೇವೆ. ಇಲ್ಲವೇ ಅವರ ಭಾವನೆಗಳಿಗೆ ಗೌರವವನ್ನೇ ಕೊಡದೆ ನಿರಾಕರಿಸುತ್ತೇವೆ. ಹಾಗೆ ಮಾಡದಿದ್ದರೂ ನಮ್ಮ ಹಿರಿಯ ತಲೆಮಾರಿಗೆ ತಾವು ಕಡೆಗಣನೆಗೆ ಒಳಗಾಗಿದ್ದೇವೆ ಎಂದು ಅನ್ನಿಸುತ್ತದೆ. ಮತ್ತೆ ಇಲ್ಲಿ ಸ್ವಾಭಿಮಾನದ ಸಂಘರ್ಷ, ವೈಯಕ್ತಿಕತೆಯ ತಾಕಲಾಟದ ಸಮಸ್ಯೆ ಕಾಡುತ್ತದೆ. ಹಾಗಾಗಿ ಅವರಿಗೆ ಚೆನ್ನಾಗಿ ಬದುಕುವ ಕೇಂದ್ರವನ್ನು ಮಾಡಬೇಕು. ಅದಕ್ಕೆ ವೃದ್ಧಾಶ್ರಮ ಎಂದು ಹೆಸರನ್ನು ಇಡಬಾರದು. ಕೇವಲ ಬಡವರಿಗೆ ಎಂದು ಸೀಮಿತ ಆಗಬಾರದು. ಏಕೆಂದರೆ ಹಿರಿಯರ ಮಾನಸಿಕ ಸಮಸ್ಯೆ ಆರ್ಥಿಕ ಹಿನ್ನೆಲೆ ಮಾತ್ರ ಇರುವುದಿಲ್ಲ. ಅವರಿಗೆ ಮನೋ ಉಲ್ಲಾಸ ಮುಖ್ಯ. ಆ ವಯಸ್ಸಿನಲ್ಲಿ ಆಪ್ತ ಸಮಾಲೋಚನೆಯಂತಹ ಚಿಕಿತ್ಸಕ ದೃಷ್ಟಿಯಿಂದಲೂ ನೋಡುವುದು ಅಷ್ಟು ಸರಿ ಅಲ್ಲ. ಅವರೂ ಸಮಾನ ವಯಸ್ಕರ ಜೊತೆ ಬೆರೆತು ಬಾಳುವ ಮೂಲಕ ಸಂತೋಷ ನೀಡಬೇಕು. ಈ ಬಗ್ಗೆ ನನ್ನ ಸ್ನೇಹಿತರ ಹತ್ತಿರ ಚರ್ಚಿಸುತ್ತೇನೆ. ನಾನು ಅಂದುಕೊಂಡಂತೆಯೇ ವಿನ್ಯಾಸ ಮಾಡುವ ಯೋಚನೆ ಇದೆ. ಅದಕ್ಕೆ ನನ್ನ ಪತಿ ಕೂಡ ಬೆಂಬಲಿಸುತ್ತಾರೆ ಎಂದು ಭಾವಿಸಿದ್ದೇನೆ.

◆ **ಯಾವ ರೀತಿಯ ಪಾತ್ರ ಇಷ್ಟಪಡುತ್ತೀರಿ?**

ಪಾತ್ರವನ್ನು ಇಷ್ಟಪಡುವುದಕ್ಕಿಂತಲೂ ಅದನ್ನು ಪ್ರಯೋಗ ಮಾಡುತ್ತೇನೆ. ಪಾತ್ರಗಳು ಇದೇ ರೀತಿ ಇರಬೇಕು ಎಂದಿಲ್ಲ. ಭಿನ್ನ ಭಿನ್ನ ಪಾತ್ರಗಳಲ್ಲಿ ನಾವು ಹೇಗೆ ತೊಡಗುತ್ತೇವೆ ಎನ್ನುವುದು ಮುಖ್ಯ. ಒಂದೇ ರೀತಿಯ ಪಾತ್ರ ಏಕತಾನತೆಯಿಂದ ಬೇಸರವನ್ನು ಹುಟ್ಟಿಸುತ್ತದೆ. ಹಾಗಾಗಿ ಸದಾ ಲವಲವಿಕೆಯಿಂದ ತೊಡಗಲು ಸಹಾಯ ಮಾಡುವಂತಹ ಪಾತ್ರಗಳನ್ನು ಮಾಡುತ್ತೇನೆ. ಚಿಕ್ಕ ಹುಡುಗಿ, ಹೆಂಗಸು ಸೇರಿದಂತೆ ದ್ವಿಪಾತ್ರಗಳಲ್ಲಿ ತಾಯಿ–ಮಗಳಾಗಿಯೂ ಕಾಣಿಸಿಕೊಂಡಿದ್ದೇನೆ. ಅದು ಚೆನ್ನಾಗಿತ್ತು, ಆ ರೀತಿಯ ಬೇರೆ ಬೇರೆ ಸ್ವರೂಪದಲ್ಲಿ ಕಾಣಿಸಿಕೊಳ್ಳಬೇಕು ಎನ್ನುವುದು ನನ್ನ ಕನಸು.

■ **ರಾಘವೇಂದ್ರ ಕೆ.**